ಬರುತ್ತೇನೆ."

ಹಾವು ತನ್ನನ್ನು ಕಚ್ಚುವುದಿಲ್ಲ ಎಂದು ಮಾತು ಕೊಟ್ಟಿದ್ದುದರಿಂದ ವಿಕ್ರಮ ಧೈರ್ಯವಾಗಿ ಕೋಲನ್ನು ರೆಂಬೆಗೆ ಹಿಡಿದ. ಹಾವು ಕೆಳಗಿಳಿದು ಬಂದು ಅವನ ಮೈಸುತ್ತ ಬಲವಾಗಿ ಸುತ್ತಿಕೊಂಡಿತು. ಆಗ ಅವನು ಗಾಬರಿಯಿಂದ, "ಅಯ್ಯೋ ಇದೇನು ಮಾಡುತ್ತ ಇದ್ದೀಯಾ?" ಎಂದು ಕೇಳಿದ. "ನಿನ್ನನ್ನು ಸಾಯಿಸುತ್ತೇನೆ" ಎಂದಿತು ಹಾವು. "ನಿನ್ನ ಪ್ರಮಾಣ ಏನಾಯಿತು?" ಎಂದು ಸಂಕಟದಿಂದ ಕೇಳಿದ. "ನಾನು ಪ್ರಮಾಣ ಮಾಡಿದ್ದೇನೋ ನಿಜ. ಆದರೆ, ಅದು ಮರದ ಮೇಲೆ. ಈಗ ನಾನು ಭೂಮಿ ಮೇಲೆ ಇದ್ದೇನೆ. ಉಪಕಾರ ಮಾಡಿದೋರಿಗೆ ಅಪಕಾರ ಮಾಡೋದು ಇಲ್ಲಿನ ರೂಢಿ!" ಎಂದು ಹೇಳಿತು ಹಾವು.

ವಿಕ್ರಮ ಯೋಚಿಸಿದ. ತನ್ನ ಕೊನೆಗಾಲ ಸಮೀಪಿಸಿತೆಂದು ಅವನಿಗೆ ತಿಳಿಯಿತು. ಆದರೂ ಧೈರ್ಯಮಾಡಿ ಹೇಳಿದ: "ನೀನು ನನ್ನನ್ನು ಸಾಯಿಸುವುದೇನೋ ಸರಿ. ಅದಕ್ಕೂ ಮುನ್ನ ಮೂರು ಜನ ಬುದ್ಧಿವಂತರ ಅಭಿಪ್ರಾಯ ಕೇಳುವುದು ಒಳ್ಳೆಯದಲ್ಲವೆ?" ಹಾವು ಈ ಸಲಹೆಗೆ ಒಪ್ಪಿತು.

ಅವರಿಬ್ಬರೂ ಮುನ್ನಡೆದಾಗ ಎದುರಿಗೆ ತೆಂಗಿನ ಮರವೊಂದು ಸಿಕ್ಕಿತು. ಹಾವು ಮರಕ್ಕೆ ನಡೆದದ್ದನ್ನೆಲ್ಲಾ ಹೇಳಿ, "ಮರ ಮರ, ಯಾರು ಸರಿ ನೀನೇ ಹೇಳು!" ಎಂದಿತು. ತೆಂಗಿನ ಮರವೆಂದಿತು: "ಈ ಭೂಮಿ ಮೇಲಿನ ಮನುಷ್ಯರಿಗೆ ನಾನು ತೆಂಗಿನಕಾಯಿ, ಎಲೆ ಕೊಡುತ್ತೇನೆ. ಆದರೆ, ಅವರಿಗೆ ಕೃತಜ್ಞತೆಯೇ ಇಲ್ಲ. ಒಂದು ದಿನ ನನ್ನ ಕಾಂಡವನ್ನು ಕತ್ತರಿಸಿ ಹಾಕ್ತಾರೆ. ಆದ್ದರಿಂದ ಹಾವೇ, ಈ ಮನುಷ್ಯನನ್ನು ನೀನು ಸಾಯಿಸುವುದೇ ಸರಿ!"



ಹಾವು ವಿಕ್ರಮನಿಗೆ ಇನ್ನುಷ್ಟು ಬಿಗಿದುಕೊಂಡಿತು. ಅವರು ಮತ್ತೆ ಸ್ವಲ್ಪ ದೂರ ಹೋದಾಗ ಹರಿಯುವ ತೊರೆ ಸಿಕ್ಕಿತು. ವಿಕ್ರಮ ಅದಕ್ಕೆ ತನ್ನ ಕತೆಯನ್ನೆಲ್ಲಾ ಹೇಳಿಕೊಂಡ. ತೊರೆ ಎಂದಿತು: "ಮನುಷ್ಯರು ನನ್ನ ಹತ್ತಿರ ಬಂದು ನೀರು ಕುಡೀತಾರೆ. ಆದರೆ, ಕಸವನ್ನೆಲ್ಲಾ ಎಸೆದು ನನ್ನ ನೀರನ್ನು ಹಾಳು ಮಾಡಲು ಹೇಸುವುದಿಲ್ಲ. ಆದ್ದರಿಂದ ಹಾವಿನ ನಿರ್ಧಾರವೇ ಸರಿ."

ಹಾವು ವಿಕ್ರಮನನ್ನು ಇನ್ನಷ್ಟು ಬಿಗಿಯಿತು. ಅವರು ಮತ್ತೂ ಸ್ವಲ್ಪ ದೂರ ಹೋದಾಗ ಮರದ ಮೇಲೆ ಕುಳಿತಿದ್ದ ಅಳಿಲೊಂದು ಕಾಣಿಸಿತು. ಹಾವು ತಮ್ಮ ಕತೆಯನ್ನೆಲ್ಲಾ ಅಳಿಲಿಗೆ ಹೇಳಿ, "ಹೂಂ, ಬೇಗ ಹೇಳು, ಯಾರು ಸರಿ ಎಂಬುದನ್ನು!" ಎಂದು ಬುಸುಗುಟ್ಟಿತು.

ಅಳಿಲು ಸ್ವಲ್ಪ ಹೊತ್ತು ಯೋಚಿಸಿ ನುಡಿಯಿತು: "ನೀವು ಯಾವ ಯಾವ ಜಾಗದಲ್ಲಿ ಹೇಗೆ ಇದ್ದಿರಿ ಅನ್ನೋದನ್ನ ನೋಡಿದ್ರೆ ತಕ್ಷಣ ಹೇಳೋಕಾಗುತ್ತಪ್ಪ..."

"ಅದೇನು ಮಹಾ ಕಷ್ಟದ ಕೆಲಸ?" ಎನ್ನುತ್ತಾ ಹಾವು ಹರಿದು ಹೋಗಿ ಮರ ಹತ್ತಿ ಕುಳಿತುಕೊಂಡು, "ಇಗೋ, ನಾನು ಹೀಗೆ ಕುಳಿತಿದ್ದೆ..." ಎಂದಿತು. ಆಗ ಅಳಿಲು ವಿಕ್ರಮನತ್ತ ಕಣ್ಣು ಮಿಟುಕಿಸಿತು. ಅವನು ತಕ್ಷಣ ತನ್ನ ಕತ್ತಿಯನ್ನೆತ್ತಿ ಹೊಡೆದು ಹಾವನ್ನು ತುಂಡರಿಸಿದ.

ಗಣೇಶ್ ಅರಳಿಕಟ್ಟೆ